ದಿನಾಂಕ 18.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ಶ್ರೀಮತಿ ಎಸ್.ಎನ್.ಎಸ್.ವಕೀಲರಿಂದಃ-**

ದಾವೆಯನ್ನು ನಾವು ಸರ್ವೆ ನಂ. 159/2 ಮತ್ತು 159/2 ಬಿ ಸ್ವತ್ತುಗಳಿಗೆ ಸಂಬಂಧಿಸಿದಂತೆ ದಾಖಲಿಸಿದ್ದೇವೆ. ಸರ್ವೆ ನಂ. 159/2 ಎ ಯ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಸರ್ವೆ ನಂ. 159/2 ರ ಪೂರ್ವಕ್ಕೆ ಸರ್ವೆ ನಂ. 159/2 ಎ ಸ್ವತ್ತು, ಪಶ್ಚಿಮಕ್ಕೆ ಸರ್ವೆ ನಂ. 159/2 ಬಿ ಸ್ವತ್ತು, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಸರ್ವೆ ನಂ. 159/2 ಎ ಸ್ವತ್ತು ಇದೆ. ಸರ್ವೆ ನಂ. 159/2 ಬಿ ಯ ಸ್ವತ್ತಿನ ಉತ್ತರಕ್ಕೆ ನನ್ನ ಮನೆಗೆ ಹೋಗುವ ರಸ್ತೆ ಇದೆ. ದಕ್ಷಿಣಕ್ಕೆ ಸರ್ವೆ ನಂ. 159/2 ಎ ಯ ಸ್ವತ್ತು ಇದೆ. ಪೂರ್ವಕ್ಕೆ ಸರ್ವೆ ನಂ. 159/2 ಎ ಯ ಸ್ವತ್ತು ಮತ್ತು ಪಶ್ಚಿಮಕ್ಕೆ ಪಾರಂಗಡ ಕುಟುಂಬದವರ ಸ್ವತ್ತು ಇದೆ.

ಸರ್ವೆ ನಂ. 159/2 ರ ಪಹಣಿಯಲ್ಲಿ 97 ಸೆಂಟ್ಸ್ ಜಾಗ ನಮೂದು ಇದೆ. ಸರ್ವೆ ನಂ. 159/2 ಬಿ ಯಲ್ಲಿ 6.55 ಎಕರೆ ಜಮೀನು ಇದೆ. ನಮ್ಮ ಏರಿಯಾದಲ್ಲಿ 1 ಎಕರೆಗೆ ಸರ್ಕಾರಿ ಮೌಲ್ಯ ರೂ. 3,00,000/- ಇದೆ. ದಾವಾ ಸ್ವತ್ತುಗಳ ಮಾರುಕಟ್ಟೆ ಬೆಲೆ ಎಕರೆಗೆ ರೂ. 35,00,000/- ರಿಂದ ರೂ. 40,00,000/- ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯ ಹೆಸರು ಎಂ.ಪಿ. ಚಂಗಪ್ಪ. ತಾಯಿ ಸೀತಮ್ಮ. ಸರ್ವೆ ನಂ. 159/2 ಎ ಯ ಸ್ವತ್ತಿನ ಪಹಣಿಯು ನನ್ನ ಮತ್ತು ನನ್ನ ಪತ್ನಿಯ ಹೆಸರಿನಲ್ಲಿ ಇದೆ.

ದಾವಾ ಸ್ವತ್ತುಗಳ ಪಹಣಿಯು ನನ್ನ ಹೆಸರಿಗೆ ಯಾವ ರೀತಿ ಬಂದಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ಪಹಣಿಯು ನನ್ನ ಹೆಸರಿಗೆ ಆಗದಂತೆ 10 ನೇ ಪ್ರತಿವಾದಿ ತಕರಾರನ್ನು ಸಲ್ಲಿಸಿದ್ದ ವಿಚಾರ ನನಗೆ ಗೊತ್ತಿಲ್ಲ.

ದಿಃ 30.03.1976 ರ ನೋಂದಾಯಿತ ವಿಭಾಗಪತ್ರದ ಮೂಲಕ ಸರ್ವೆ ನಂ. 159/2 ನನ್ನ ಹಿಸ್ಸೆಗೆ ಬಂದಿರುತ್ತದೆ. ಸದರಿ ವಿಭಾಗಪತ್ರದ ಪ್ರಕಾರ ಸರ್ವೆ ನಂ. 159/2 ಬಿ ಪ್ರತಿವಾದಿಗಳ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಇರಬಹುದು. ದಿನಾಂಕಃ 08.06.2001 ರಲ್ಲಿ ನನ್ನ ತಂದೆ ನನ್ನ ಹೆಸರಿನಲ್ಲಿ ಒಂದು ನೋಂದಾಯಿತ ಮರಣಶಾಸನ ಪತ್ರವನ್ನು ಬರೆದಿರುತ್ತಾರೆ ಎಂದರೆ ಸರಿ. ಸದರಿ ಮರಣಶಾಸನದ ಪ್ರಕಾರ ಕೆಲವು ಆಸ್ತಿಗಳನ್ನು ನನ್ನ ತಂದೆ ನನ್ನ ಹೆಸರಿಗೆ, ನನ್ನ ಮಕ್ಕಳ ಹೆಸರಿಗೆ ಹಾಗೂ 10 ನೇ ಪ್ರತಿವಾದಿಯ ಹೆಸರಿಗೆ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಮರಣಶಾಸನ ಮೂಲಕ ನನ್ನ ಮತ್ತು ನನ್ನ ಮಕ್ಕಳ ನಡುವೆ ಆಸ್ತಿ ಬಂದಿರುತ್ತದೆ ಎಂದರೆ ಸರಿಯಲ್ಲ. ನನ್ನ ಮಕ್ಕಳ ಹೆಸರಿನಲ್ಲಿ ನನ್ನ ತಂದೆಯ ಹೆಸರಿಗೆ ಯಾವುದೇ ಆಸ್ತಿ ಇರುವುದಿಲ್ಲ. ನನ್ನ ಮಕ್ಕಳು ಮರಣ ಶಾಸನ ಮೂಲಕ ಪಡೆದುಕೊಂಡಿರುವ ಆಸ್ತಿಯ ಮೇಲೆ ದಾವೆಯನ್ನು ಹೂಡಿರುವ ವಿಚಾರ ನನಗೆ ಗೊತ್ತಿಲ್ಲ. ಚಂಗಪ್ಪ ಮತ್ತು ಸೀತಮ್ಮರವರು ಜಂಟಿಯಾಗಿ ಮಾಡಿರುವ ಮರಣಶಾಸನದಲ್ಲಿ ನನಗೆ ಆಸ್ತಿ ಬಂದಿರುವ ಬಗ್ಗೆ ನನಗೆ ಗೊತ್ತಾಗುತ್ತಿಲ್ಲ. ನನ್ನ ಮಕ್ಕಳಿಗೂ ಸಹ ಬಂದಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ ಚಂಗಪ್ಪ ಮತ್ತು ಸೀತಮ್ಮರವರು ಜಂಟಿಯಾಗಿ ಬರೆದುಕೊಟ್ಟ ಮರಣಶಾಸನದ ಪ್ರಕಾರ ನನ್ನ

ಮಕ್ಕಳ ಹೆಸರಿಗೆ ಕಂದಾಯ ದಾಖಲೆಗಳು ಬದಲಾವಣೆಯಾಗಿರುವ ವಿಚಾರ ನನಗೆ ಗೊತ್ತಿಲ್ಲ.

ಅಸಲು ದಾವಾ ಸಂಖ್ಯೆ 239/2015 ನ್ನು ನನ್ನ ಮಕ್ಕಳು ಹೂಡಿದ್ದು, ಆ ದಾವೆಯಲ್ಲಿ ನಾನು ನನ್ನ ಮಕ್ಕಳ ಪರವಾಗಿ ಜಿ.ಪಿ.ಎ ಹೋಲ್ಡರ್ ಆಗಿ ಪ್ರತಿನಿಧಿಸುತ್ತಿದ್ದೇನೆ ಎಂದರೆ ಸುಳ್ಳು. ಸದರಿ ದಾವೆಯಲ್ಲಿ ನನ್ನ ಪತ್ನಿಯು ಸಹ ಪಕ್ಷಗಾರಳು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿರುವ ಸ್ವತ್ತುಗಳು ಮರಣಶಾಸನದ ಮೂಲಕ ಬಂದಿರುತ್ತವೆ ಎಂದರೆ ಇರಬಹುದು. ಮರಣಶಾಸನದ ಮೂಲಕ ಕಂದಾಯ ದಾಖಲೆಗಳನ್ನು ನನ್ನ ಹೆಸರಿಗೆ ಮಾಡಿಕೊಡುವಂತೆ ನಾನು ತಹಶೀಲ್ದಾರ್ ರವರಿಗೆ ಅರ್ಜಿಯನ್ನು ನೀಡಿರುತ್ತೇನೆ ಎಂದರೆ ಇರಬಹುದು. ಸದರಿ ಅರ್ಜಿಯನ್ನು ಯಾವ ಸರ್ವೆ ನಂಬರ್ ಗಳಿಗೆ ಸಂಬಂಧಿಸಿದಂತೆ ನೀಡಿರುತ್ತೇವೆ ಎಂಬುದು ನನಗೀಗ ನೆನಪಿಲ್ಲ. ಮರಣಶಾಸನದ ಆಧಾರದಲ್ಲಿ ಖಾತೆ ಮಾಡುವಂತೆ 10ನೇ ಪ್ರತಿವಾದಿಯು ಅರ್ಜಿಯನ್ನು ತಹಶೀಲ್ದಾರ್ ರವರಿಗೆ ನೀಡಿದ್ದರು ಎಂದರೆ ಸರಿ. ಸದರಿ ಅರ್ಜಿಗಳಿಗೆ ನಾನು ತಕರಾರನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

2007 ರಿಂದ ಸರ್ವೆ ನಂ. 159/2 ಎ ಸ್ವತ್ತು ನನ್ನ ಸ್ವಾಧೀನದಲ್ಲಿ ಇದೆ. 2007 ರಿಂದ ಸರ್ವೆ ನಂ. 159/2 ಸ್ವತ್ತು ನನ್ನ ಸ್ವಾಧೀನದಲ್ಲಿ ಇದೆ. ಅದರಲ್ಲಿ ಕಾಫಿ ಈಗ ನಾನು ಕೊಯ್ಯುತ್ತಿದ್ದೇನೆ. ಸರ್ವೆ ನಂ. 159/2 ಬಿ, ಯಾರ ಸ್ವಾಧೀನದಲ್ಲಿ ಇದೆ ಎಂಬುದು ನನಗೆ ಗೊತ್ತಿಲ್ಲ. ಸರ್ವೆ ನಂ. 159/2 ರ ಸ್ವತ್ತಿನ ಸಿ.ಆರ್.ಸಿ ಪ್ರಮಾಣಪತ್ರ 10ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ

ಎಂಬ ಪ್ರಶ್ನೆಗೆ ಸಾಕ್ಷಿಯು ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ 2007 ರ ನಂತರ ಮಾಡಿಕೊಂಡಿರುತ್ತಾರೆ. ಸರ್ವೆ ನಂ. 159/2 ಬಿ ಸ್ವತ್ತಿನ ಸಿ.ಆರ್.ಸಿ ಪ್ರಮಾಣಪತ್ರ ಯಾರ ಹೆಸರಿನಲ್ಲಿ ಇದೆ ಎಂಬುದು ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳ ಪಹಣಿಗಳು 10 ನೇ ಪ್ರತಿವಾದಿಯ ಹೆಸರಿನಲ್ಲಿ ಇವೆ. ಸರ್ವೆ ನಂ. 159/2 ಎ, ವಿಸ್ತೀರ್ಣ 6 ಎಕರೆ ಸ್ವತ್ತಿನ ಪಹಣಿ ನನ್ನ ಹೆಸರಿನಲ್ಲಿ ಇದೆ. ಸದರಿ ಸ್ವತ್ತಿನ ಮೇಲೆ ನಾನು ಬ್ಯಾಂಕಿನಲ್ಲಿ ಸಾಲ ಪಡೆದಿರುತ್ತೇನೆ. ಸದರಿ ಸ್ವತ್ತಿನ ಮೇಲೆ ನಾನು ಅಸಲು ದಾವಾ ಸಂಖ್ಯೆ 48/2008 ನ್ನು ದಾಖಲಿಸಿದ್ದೆನು ಎಂದರೆ ಸರಿ. ದಾವಾ ಸ್ವತ್ತುಗಳು ಮತ್ತು ಸರ್ವೆ ನಂ. 159/2 ಎ ಸ್ವತ್ತುಗಳ ನಡುವೆ ಬೇಲಿ ಇರುವುದಿಲ್ಲ.10 ನೇ ಪ್ರತಿವಾದಿಗೆ ದಾವಾ ಸ್ವತ್ತುಗಳ ಮೇಲೆ ಪೂರ್ಣ ಹಕ್ಕು ಇದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಮಧ್ಯೆ ಇದ್ದ ಬೇಲಿಯನ್ನು ನಾನು ಕಿತ್ತು ಹಾಕಿರುತ್ತೇನೆ ಎಂದರೆ ಸರಿಯಲ್ಲ. 10 ನೇ ಪ್ರತಿವಾದಿಗೆ ಸೇರಿದ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ
(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.